Sri VEERENDRA PATIL (Chief Minister).—

(*a*) 14.

(*b*) 215.

(*c*) The village could not be included in the current year's Rural Electrification Programme due to limited outlay.

## Seven year Prohibition Programme in the State

288. Sri D. M. SIDDIAH (Biligere).—

Will the Minister for Finance, Planning and Youth Welfare be pleased to state :—

(*a*) whether the Government has proposals to enforce total prohibition within a period of seven years and if so, whether any plans have been drawn up in this regard;

(*b*) whether the Government would reconsider the policy of implementation in view of the fact that there must be seperate Department to implement the policy of the prohibition;

(*c*) whether the Government consider that there is necessity for much propaganda and publication and pamphlets on the evils of drinking in order to successfully and wholeheartedly implement the prohibition programme;

(*d*) whether the Government has thought of any alternate source of income to make good the loss of revenue on account of prohibition ?

Sri RAMAKRISHNA HEGDE (Minister for Finance, Planning and Youth Welfare).—

(*a*) to (*d*) The matter will be examined at the appropriate time.

## Tour of Minister for Social Welfare

150. Sri B. B. SAYANAK (Belgaum).—

Will the Chief Minister be pleased state :—

(*a*) the number of times Sri V. L. Patil, Minister for Social Welfare, has visited Belgaum District and other districts of State after he became a Minister ;

(*b*) the expenditure of his tour programme ;

(*c*) the number of days he was at Ghataprabha when he was on tour ?

Sri VEERENDRA PATIL (Chief Minister).—

(*a*) Belgaum District—9 times.
other Districts—Nil.

(*b*) Rs. 7,679-60.

(*c*) Two days—on 12-8-68 and 15-8-68.

*The House rose at One of the Clock and re-assembled at Fifty-five Minutes past One of the Clock.*

[MR. SPEAKER in the Chair]

## Order of Suspension of a Member rescinded by Speaker

†ಶ್ರೀ ಎಸ್. ಚೆನ್ನಯ್ಯ (ಕೃಷ್ಣರಾಜ).—ಸ್ವಾಮಿ ಅಧ್ಯಕ್ಷರೇ, ಈ ದಿನ ಪ್ರಶ್ನೋತ್ತರ ಕಾಲ ಬಹಳ ಚೆನ್ನಾಗಿ ನಡೆಯಿತು. ನಮಗೆ ಬಹಳ ಸಂತೋಷವಾಯಿತು. ನೆನ್ನೆ ಮೊನ್ನೆ ಪ್ರಶ್ನೋತ್ತರ ಕಾಲದಲ್ಲಿ ಸ್ವಲ್ಪ ಗಲಾಟೆಯಾಗುತ್ತಿತ್ತು. ಆದರೆ ಈವತ್ತು ಬಹಳ ಚೆನ್ನಾಗಿ ನಡೆಯುತ್ತಿತ್ತು. ಚೆನ್ನಾಗಿ ನಡೆಯಿತು ಎಂದು ನಾನು ಹೇಳಬೇಕೆಂದಿದ್ದೆ ಅಷ್ಟರೊಳಗೆ ಗಲಾಟೆಯಾಯಿತು. ನಾನು ಸಹ 5-6 ಸಲ ಮಾತನಾಡಬೇಕೆಂದು ನಿಂತುಕೊಂಡೆ. ಆದರೆ ತಮ್ಮ ಕಣ್ಣಿಗೆ ನಾನು ಬೀಳಲಿಲ್ಲ ವೆಂದು ಕಾಣುತ್ತದೆ. ಏನು ನಡೆದಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ನಾನು ಒಂದು ಸಾರಿ ಕೌನ್ಸಿಲಿನ ಸದಸ್ಯನಾಗಿದ್ದೆ. ಅನೇಕ ಸಾರಿ ಅಸೆಂಬ್ಲಿ ಸದಸ್ಯನಾಗಿದ್ದೇನೆ. 40-50 ವರ್ಷಗಳಿಂದ ಅಂದರೆ, ಶ್ರೀ ದಾಸಪ್ಪನವರ ಕಾಲದಿಂದಲೂ ನಾನು ಸದಸ್ಯನಾಗಿದ್ದೇನೆ. 18 ವರ್ಷದ ಹುಡುಗ ನಾಗಿದ್ದಾಗ ಶ್ರೀ ದಾಸಪ್ಪನವರು ನನಗೆ ಅಸೆಂಬ್ಲಿಗೆ ಬಂದು ಕುಳಿತುಕೊಳ್ಳುವಂತೆ ಹೇಳುತ್ತಿದ್ದರು. ಈ ಸಭೆ ನೆನ್ನೆ ಮೊನ್ನೆಯಿಂದ ಯಾವ ಸ್ಥಿತಿಗೆ ಬರುತ್ತಿದೆ, ಮುಂದೆ ಏನಾಗಬಹುದು ಎಂಬುದನ್ನು ಯೋಚನೆ ಮಾಡುತ್ತಿದ್ದೇನೆ. ಈ ದಿನದ ಬಗ್ಗೆ ನನಗೆ ವ್ಯಸನವಾಯಿತು. ನಾನು ರಾಜೀನಾಮೆ ಕೊಡುವುದಕ್ಕೂ ತಯಾರಿದ್ದೇನೆ. ಏಕೆಂದರೆ ಇಷ್ಟು ಗಲಾಟೆಯಾಗುವಾಗ ನಮ್ಮಂಥ ವರು ಇಲ್ಲಿ ಇರಬಾರದು. ಯಾರಾದರು ಬಂದು ಹೊಡೆದರೆ ಮತ್ತೆ ತಿರುಗಿ ಹೊಡೆಯುವುದಕ್ಕೆ ನನಗೆ ಶಕ್ತಿ ಇಲ್ಲ. ಈ ದಿವಸ ಆಗಿರುವುದನ್ನು ಎಲ್ಲರೂ ಮರೆಯಬೇಕು ನನ್ನ ಸ್ನೇಹಿತರು ಈ ಸಭೆಯಲ್ಲಿ ಏನೋ ಸೂಚನೆ ಮಾಡಿದರು. ಆದರೆ ಅವರು ಏನನ್ನು ಮೂವ್ ಮಾಡಿದರು, ಏನು ಹೇಳಿದರು ಎಂಬುದು ನನಗೆ ಗೊತ್ತಾಗಲಿಲ್ಲ. ತಾವು ಸಹ ಏನೋ ಹೇಳಿದಿರಿ, ಅದು ಸಹ ನನಗೆ ಗೊತ್ತಾಗಲಿಲ್ಲ. ಅಷ್ಟರೊಳಗೆ ಗಲಾಟೆಯಾಯಿತು. ಈ ರೀತಿ ಗಲಾಟೆಯಾಗಿದ್ದು ಕಳೆದ 50 ವರ್ಷಗಳಲ್ಲಿ ಇದೇ ಮೊದಲು ಎಂದು ಹೇಳುತ್ತೇನೆ. ಹೆಮ್ಮೆಯಿಂದ ಒಂದು ವಿಚಾರವನ್ನು ಹೇಳಬೇಕೆಂದರೆ, ನಾನು ಅಸೆಂಬ್ಲಿ ವಿಚಾರದಲ್ಲಿ ದೊರವಿದ್ದರೂ ಸಹ ಮಿರ್ಜಾ ಅವರು ದಾನಪ್ಪನವರ ಹತ್ತಿರ ನನಗೆ ಹೇಳಿಕಳಿಸುತ್ತಿದ್ದರು. ಕಾರಣಾಂತರದಿಂದ ನಾನು ಅಸೆಂಬ್ಲಿಗೆ ಬರ ಬೇಕಾಯಿತು. ಈಗ ನಾನು ಹೇಳುವುದೇನೆಂದರೆ ಈ ದಿನ ನಡೆದಿದ್ದನ್ನು ಮರೆತುಬಿಡೋಣ. ತಾವು ಶ್ರೀ ಅಜೀಜ್‌ಸೇಠ್ ಅವರಿಗೆ ಮನ್ನಣೆ ಕೊಡಬೇಕು. ನಾನು ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡುತ್ತಿದ್ದೇನೆ. ಆದ್ದರಿಂದ ತಾವು ದಯವಿಟ್ಟು ಅಜೀಜ್‌ಸೇಠ್ ಅವರನ್ನು ಸಹ ಈ ಸಭೆಯಲ್ಲಿ ಕೂಡಿಸಿ ಕೊಂಡು ಮುಂದಿನ ಕಾರ್ಯಕಲಾಪಗಳನ್ನು ನಡೆಸಬೇಕು. ಯಾರೂ ಇನ್ನು ಮುಂದೆ ಸಭೆಯಲ್ಲಿ ಗಲಾಟೆಗೆ ಅವಕಾಶ ಮಾಡಿಕೊಡಬಾರದು. ಏಕೆಂದರೆ ಅಸೆಂಬ್ಲಿ ಕೆಟ್ಟುಹೋದರೆ ನಮಗೇ ಕೆಟ್ಟ ಹೆಸರು, ಅಧ್ಯಕ್ಷರಿಗೆ ಅವಮಾನವಾದರೆ ನಮಗೆ ಅದಂತೆ, ಈ ಸಭೆ ನಮಗೆ ಸೇರಿದ್ದು, ಈ ಸಭೆಯ ಗೌರವ ಕಾಪಾಡುವುದು ನಮಗೆ ಸೇರಿದ್ದು. ಈ ದೃಷ್ಟಿಯಿಂದ ಅಧ್ಯಕ್ಷರನ್ನು ಎಲ್ಲಾ ವಿಷಯ ದಲ್ಲಿಯೂ ಮನ್ನಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ಕಾರ್ಮಿಕ, ನ್ಯಾಯ ಮತ್ತು ಪಾರ್ಲಮೆಂಟರಿ ವಿಷಯಗಳ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಯಾವುದೇ ಜೀವಂತ ಸಂಸ್ಥೆಯಲ್ಲಿಯೂ ತಿಕ್ಕಾಟ ಇದ್ದೇ ಇರುತ್ತದೆ. ಗಲಾಟೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ. ಈವತ್ತು ಈ ಸಭೆಯಲ್ಲಿ ಸಭೆಯ ಕಾರ್ಯ